# ಪ್ರೇಮೋನ್ಮಾದ



ಪ್ರೇಮೋನ್ಮಾದವೆಂಬುದು ಏನು ಗೊತ್ತೆ? ಆ ಅವಸ್ಥೆ ಉಂಟಾದಾಗ ಈ ಜಗತ್ತೇ ಮರೆತುಹೋಗಿಬಿಡುತ್ತದೆ. ಆಹಾ! ಗೋಪಿಯರದು ಎಂಥ ಪ್ರೇಮ! ಆ ಪ್ರೇಮದ ಒಂದು ಬಿಂದು ಯಾರಿಗಾದರೂ ಉಂಟಾಗುವುದಾದರೆ! ಅದು ಎಂಥ ಅನುರಾಗ! ಏನು ಪ್ರೀತಿ ಅದು! ರಾಧೆಯದು ಕೇವಲ ನೂರಕ್ಕೆ ನೂರು ಭಾಗವಲ್ಲ, ನೂರಕ್ಕೆ ನೂರಿಪ್ಪತ್ತೈದು ಭಾಗ ಅನುರಾಗ! ಇದಕ್ಕೆ ಪ್ರೇಮೋನ್ಮಾದ ಅಂತ ಹೆಸರು.

ಮುಖ್ಯವಾಗಿ, ಭಗವಂತನನ್ನು ಪ್ರೀತಿಸಬೇಕು. ಆತನ ಸಾಕ್ಷಾತ್ಕಾರಕ್ಕಾಗಿ ವ್ಯಾಕುಲ ಪಡಬೇಕು. ನೀನು ಯಾವ ಮಾರ್ಗವನ್ನಾದರೂ ಅನುಸರಿಸು; ಸಾಕಾರದಲ್ಲಾದರೂ ಶ್ರದ್ಧೆಯಿಡು, ನಿರಾಕಾರದಲ್ಲಾದರೂ ಶ್ರದ್ಧೆಯಿಡು; ಭಗವಂತ ಮನುಷ್ಯರೂಪಿನಲ್ಲಿ ಅವತರಿಸುತ್ತಾನೆ ಎಂಬುದರಲ್ಲಿ ನಿನಗೆ ಶ್ರದ್ಧೆ ಇರಲಿ, ಬಿಡಲಿ; ಆತನಲ್ಲಿ ಪ್ರೇಮವಿದ್ದರೆ ಬೇಕಾದಷ್ಟಾಯಿತು. ಆಗ ಆತ ತನ್ನ ನಿಜಸ್ವರೂಪ ಏನು ಎಂಬುದನ್ನು ತಾನಾಗಿಯೇ ತೋರಿಸಿಕೊಟ್ಟು ಬಿಡುತ್ತಾನೆ. ಹುಚ್ಚನಾಗಬೇಕಾಗಿದ್ದರೆ, ಪ್ರಾಪಂಚಿಕ ವಸ್ತುಗಳಿಗಾಗಿ ಏಕೆ ಹುಚ್ಚನಾಗಬೇಕು? ಹುಚ್ಚನಾಗಬೇಕಾದರೆ, ಭಗವಂತನಿಗಾಗಿ ಹುಚ್ಚನಾಗು.

ಪ್ರೇಮೋನ್ಮಾದ ಉಂಟಾಗಿಬಿಟ್ಟಿತು ಎಂದರೆ, ಆಗ ಈತ ತಂದೆ, ಆಕೆ ತಾಯಿ, ಈಕೆ ಹೆಂಡತಿ ಎಂಬ ಭಾವನೆ ಎಲ್ಲಿರುತ್ತದೆ! ಭಕ್ತ ಭಗವಂತನನ್ನು ಅಷ್ಟೊಂದು ಪ್ರೀತಿಸುತ್ತಿರುತ್ತಾನೆ, ಆತ ಹುಚ್ಚನಂತಾಗಿಬಿಡುತ್ತಾನೆ. ಅಂಥವನಿಗೆ ಯಾವ ಕರ್ತವ್ಯವೂ ಇರದು. ಸಕಲ ಋಣಗಳಿಂದ ಮುಕ್ತ. ಸ್ವಂತ ದೇಹವಿದೆಯಲ್ಲ, ಅದು ಎಷ್ಟೊಂದು ಪ್ರೀತಿಯ ವಸ್ತು! ಅದು ಕೂಡ ಮರೆತು ಹೋಗಿಬಿಡುತ್ತದೆ. ಈ ಅವಸ್ಥೆ ಚೈತನ್ಯದೇವನಿಗೆ ಉಂಟಾಗಿತ್ತು. ಆತನಿಗೆ ಸಮುದ್ರ ಕಣ್ಣಿಗೆ ಬಿದ್ದಾಗ, ಅದು ಯಮುನೆ ಎಂದು ಭಾವಿಸಿ ಅದಕ್ಕೆ ಧುಮುಕಿಬಿಟ್ಟ—ಅದು ಸಾಗರ ಎಂಬ ಜ್ಞಾನವಿಲ್ಲದೆ. ತತ್ತರಿಸಿ ತತ್ತರಿಸಿ ಆಗಾಗ ನೆಲದ ಮೇಲೆ ಬೀಳುತ್ತಲೇ ಇರುತ್ತಿದ್ದ. ಹಸಿವು, ಬಾಯಾರಿಕೆ, ನಿದ್ರೆ, ಇವುಗಳ ಅರಿವು ಆತನಿಗಾಗುತ್ತಿರಲಿಲ್ಲ. ತನ್ನ ಶರೀರವೆಂಬುದೊಂದಿದೆ ಎಂಬ ಪ್ರಜ್ಞೆಯೇ ಆತನಿಗಿರುತ್ತಿರಲಿಲ್ಲ. ಗೌರಾಂಗನಿಗೆ ಮಹಾ ಭಾವ ಮತ್ತು ಪ್ರೇಮ ಎರಡೂ ಉಂಟಾಗಿದ್ದುವು. ಪ್ರೇಮ ಉದಯವಾಯಿತು ಎಂದರೆ, ಈ ಜಗತ್ತು ಮರೆತೇ ಹೋಗಿ ಬಿಡುತ್ತದೆ. ಸಾಮಾನ್ಯ ಜೀವರಿಗೆ ಮಹಾಭಾವವೇ ಆಗಲಿ, ಪ್ರೇಮವೇ ಆಗಲಿ ಉಂಟಾಗುವುದಿಲ್ಲ. ಅವರು ಭಾವದವರೆಗೆ ಮಾತ್ರ ಮುಂದುವರಿಯಬಲ್ಲರು. ಭಗವಂತನನ್ನು ಪ್ರೀತಿಸಿದುದೇ ಆದರೆ ಯಾವ ಅಭಾವವೂ ಇರದು.

ಗೋಪಿಯರದು ಪ್ರೇಮಾ ಭಕ್ತಿ. ಇದರಲ್ಲಿ ಎರಡು ಭಾವಗಳಿವೆ—ಅಹಂಕಾರ, ಮಮಕಾರ. ನಾನು ಕೃಷ್ಣನ ಸೇವೆ ಮಾಡದಿದ್ದರೆ ಆತನಿಗೆ ಅಸೌಖ್ಯ ಉಂಟಾಗುತ್ತದೆ ಎಂಬ ಭಾವನೆಗೆ ಅಹಂಕಾರ ಎಂದು ಹೆಸರು. ಈ ಭಾವದಲ್ಲಿ ಭಕ್ತ ಭಗವಂತನನ್ನು ಭಗವಂತನೆಂದು ಭಾವಿಸುವುದಿಲ್ಲ. ಎಂದರೆ ಆತನಿಗೆ ಭಗವದ್ಬೋಧೆ ಇರದು.

ಮಮಕಾರ—"ನನ್ನದು, ನನ್ನದು" ಎನ್ನುವುದು. ಗೋಪಿಯರಿಗೆ ಶ್ರೀಕೃಷ್ಣನಲ್ಲಿ ಅಂಥ ಮಮತೆ, ಆತನ ಪಾದಗಳು ನೋಯಬಹುದೆಂದು ಅವರು ತಮ್ಮ ಸೂಕ್ಷ್ಮಶರೀರಗಳನ್ನು ಆತನ ಪಾದದಡಿಯಲ್ಲಿ ಇಡುತ್ತಿದ್ದರು.

ಯಶೋದೆ ಹೇಳಿದಳು: "ನನಗೆ ನಿಮ್ಮ ಚಿಂತಾಮಣಿ ಕೃಷ್ಣ ಗೊತ್ತಿಲ್ಲ—ಆತ ನನ್ನ ಗೋಪಾಲ." ಗೋಪಿಯರೂ ಹೇಳಿದರು: "ನಮ್ಮ ಪ್ರಾಣವಲ್ಲಭನೆಲ್ಲಿ? ಎಲ್ಲಿ ಹೃದಯವಲ್ಲಭ ಕೃಷ್ಣ?" ಅವರಿಗೆ ಭಗವಂತ ಎಂಬ ಬೋಧೆ ಇರಲಿಲ್ಲ. ಸಮಾಧಿಯ ಅವಸ್ಥೆ ಪ್ರೇಮದಿಂದ ಪ್ರೇರಿತವಾದುದು. ಗೋಪಿಯರು ಶ್ರೀಕೃಷ್ಣನಲ್ಲಿಟ್ಟಿದ್ದ ಪ್ರೀತಿಯನ್ನು ಅನುಸರಿಸಬೇಕು.

ಇದು ಚಿಕ್ಕ ಮಗುವು, "ಅವರು ನಮ್ಮ ತಂದೆ" ಎಂದು ಹೇಳುವ ಹಾಗೆ. ಯಾರಾದರೂ ಅದಕ್ಕೆ ಹೇಳಿದರೆ, "ಅಲ್ಲ ಕಣೊ ಆತ ನಿಮ್ಮ ತಂದೆಯಲ್ಲ," ಅದು ಹೇಳುತ್ತದೆ: "ಇಲ್ಲ, ಇಲ್ಲ, ಅವರು ನಮ್ಮ ತಂದೆಯೇ."

ಸತ್ಯವೇನೆಂದರೆ, ಮನುಷ್ಯರು ನೋಡುವುದಕ್ಕೇನೋ ಒಂದೇ ರೀತಿಯಾಗಿ ಕಾಣುತ್ತಾರೆ. ಆದರೆ ಕೆಲವರ ಆಂತರ್ಯದಲ್ಲಿ ಹಾಲು ಖೋವದಿಂದ ತಯಾರಿಸಿದ ಹೂರಣ ತುಂಬಿರುತ್ತದೆ. ಕಡುಬುಗಳಲ್ಲಿ ಕೆಲವದರೊಳಗೆ ಉದ್ದಿನ ಹೂರಣ ತುಂಬಿರುತ್ತದೆ. ಇನ್ನು ಕೆಲವದರೊಳಗೆ ಹಾಲು ಖೋವದ ಹೂರಣ ತುಂಬಿರುತ್ತದೆ. ಆದರೆ ಹೊರಗೆ ನೋಡುವುದಕ್ಕೆ ಮಾತ್ರ ಎಲ್ಲಾ ಒಂದೇ ರೀತಿಯಾಗಿ ಕಾಣುತ್ತದೆ. ಭಗವಂತನನ್ನು ಅರಿಯಬೇಕೆಂಬ ಇಚ್ಛೆ, ಆತನಲ್ಲಿ ಪ್ರೇಮಾ ಭಕ್ತಿ ಇವೇ ಮೊದಲಾದುವೇ ಹಾಲುಖೋವದ ಹೂರಣ.

ಪರಮಹಂಸರು ರಾಖಾಲನನ್ನು ನೋಡುತ್ತ ಪ್ರೇಮೋನ್ಮತ್ತರಾಗಿ, "ಗೋವಿಂದ" "ಗೋವಿಂದ" ಎಂದು ಸಂಬೋಧಿಸಿದರು. ಅವರು ರಾಖಾಲನಲ್ಲಿ ಸಾಕ್ಷಾತ್ ನಾರಾಯಣನನ್ನೇ ನೋಡಿದರೇನು? ರಾಖಾಲ ಕಾಮಕಾಂಚನ ತ್ಯಾಗಿ, ಶುದ್ಧಾತ್ಮ ಬಾಲಭಕ್ತ. ಪರಮಹಂಸರು ಭಗವತ್ಪ್ರೇಮದಿಂದ ಹಗಲಿರುಳೂ ಉನ್ಮತ್ತರು. ಬಾಲಕನಾದ ಶ್ರೀಕೃಷ್ಣನನ್ನು ನೋಡಿ ಯಶೋದೆಗೆ ಯಾವ ಭಾವ ಉಂಟಾಗುತ್ತಿತ್ತೋ, ಅದೇ ಭಾವ ರಾಖಾಲನನ್ನು ನೋಡಿ ಪರಮಹಂಸರಿಗೆ ಉಂಟಾಗಿರಬೇಕು. ಭಕ್ತರೆಲ್ಲರೂ ಆಶ್ಚರ್ಯಚಕಿತರಾಗಿ ಅವರನ್ನೇ ದೃಷ್ಟಿಸಿ ನೋಡುತ್ತಿದ್ದಾರೆ. ಪರಮಹಂಸರ ಶರೀರ ಚಿತ್ರದ ಬೊಂಬೆಯಂತೆ ಸ್ಥಿರವಾಗಿಬಿಟ್ಟಿದೆ. ಇಂದ್ರಿಯ ಸಮೂಹಗಳೆಲ್ಲ ತಮ್ಮ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟುಬಿಟ್ಟಿವೆ. ದೃಷ್ಟಿ ನಾಸಿಕಾಗ್ರದಲ್ಲಿ ಸ್ಥಿರವಾಗಿಬಿಟ್ಟಿದೆ, ಉಸಿರಾಡುವುದು ನಿಂತು ಹೋದಂತೆಯೇ ಇದೆ. ಅವರ ಆತ್ಮಪಕ್ಷಿ ಬಹುಶಃ ಚಿದಾಕಾಶದಲ್ಲಿ ಸಂಚರಿಸುತ್ತಿದೆ ಅಂತ ಕಾಣುತ್ತದೆ.

(ಶ್ರೀರಾಮಕೃಷ್ಣ ವಚನವೇದದಿಂದ)